ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 24.07.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ. **RM** ವಕೀಲರಿಂದಃ

1. ನಾನು 2 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರುವುದಿಲ್ಲ, ಆದರೆ ಕನ್ನಡದಲ್ಲಿ ಸಹಿ ಮಾಡುತ್ತೇನೆ. ವಾದಿ ನನಗೆ ಸಂಬಂಧಿಕವಾಗಿಲ್ಲ, ಆದರೆ ಪರಿಚಯ ಇರುತ್ತಾರೆ, ಅವರು ನನ್ನ ಬಳಿ ಜಮೀನು ಬೇಕೆಂದು ಕೇಳಿ ಬಂದಿದ್ದರು. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ. ನಾನು ವ್ಯವಸಾಯವನ್ನು ಮಾಡುತ್ತೇನೆ. ಪ್ರತಿವಾದಿರವರು ನನ್ನ ಒಂದು ಜಮೀನನ್ನು ಖರೀದಿ ಮಾಡಿದ್ದರು ಹಾಗಾಗಿ ಅವರು ಪರಿಚಯ. ಪ್ರತಿವಾದಿ ತನ್ನ ಜಮೀನನ್ನು ಯಾರಿಗಾದರೂ ಮಾರಾಟ ಮಾಡಿಸಿ ಎಂದು ನನಗೆ ಹೇಳಿದ್ದರು ಹಾಗಾಗಿ ನಾನು ವಾದಿರವರಿಗೆ ಪ್ರತಿವಾದಿಯವರೊಂದಿಗೆ ಪರಿಚಯ ಮಾಡಿಸಿಕೊಟ್ಟೆ ಆ ರೀತಿ ಪರಿಚಯ ಆದ ಮೇಲೆ ವಾದಿ ಮತ್ತು ಪ್ರತಿವಾದಿಗೆ ಶಿಡ್ಲಘಟ್ಟದ ತಾಲೂಕು ಕಚೇರಿಯಲ್ಲಿ ಜಮೀನಿನ ಮಾತುಕತೆಯಾಯಿತು. ಆಗ ನಾನು, ರಾಮಸ್ವಾಮಿ ಮತ್ತು ವಾದಿ ಮತ್ತು ಪ್ರತಿವಾದಿಗಳು ಇದ್ದೇವು. ಮಾತುಕತೆಯಾದ ದಿನದಂದೇ ಕ್ರಯದ ಕರಾರು ಕೂಡ ಅವರ ನಡುವೆಯಾಯಿತು. ಮಾತುಕತೆಯು 4 ಎಕರೆ ಜಮೀನಿಗೆ ಆಯಿತು. ಆಗ 1 ಎಕರೆಗೆ ಎಷ್ಟು ಮೌಲ್ಯ ಇತ್ತು ನನಗೆ ಗೊತ್ತಿಲ್ಲ.

2. ಆ ರೀತಿ ಮಾತುಕತೆಯಾಗುವ ಕಾಲದಲ್ಲಿ ಜಮೀನು ಜಿಲ್ಲಾಧಿಕಾರಿ ಆದೇಶದಂತೆ ಕನ್ವರ್ಷನ್ ಆಗಿತ್ತು ಎಂದರೆ ನನಗೆ ಹೇಳಿಲ್ಲ ಎಂದು ನುಡಿಯುತ್ತಾರೆ. ಕ್ರಯದ ಕರಾರಿನ ವಿಚಾರಗಳನ್ನು ನನಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿದೆ. ನನ್ನ ಊರು ಯರಬಚ್ಚಲ್ಲಿ ಅದು ದಾವಾ ಸೊತ್ತು ಇರುವ ಊರಿನಿಂದ

ಅರ್ಧ ಕಿ ಮೀ ದೂರದಲ್ಲಿದೆ. ದಾವಾ ಸೊತ್ತು ಜಮೀನು ಬಾಗೇಪಲ್ಲಿ ಹೈವೆಗೆ ಹೊಂದಿಕೊಂಡಂತೆ ಇದೆ. ಆಗ ಆ ಪ್ರದೇಶದಲ್ಲಿ ಒಂದು ಸೈಟಿನ ಮೌಲ್ಯ ಎಷ್ಟು ಇತ್ತು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಮಾತುಕತೆ ಮಾಡಿಕೊಂಡ ದಿನದಂದು ವಾದಿಯು ಪ್ರತಿವಾದಿಗೆ ರೂ. 4 ಲಕ್ಷ ಹಣವನ್ನು ಕೊಟ್ಟ. ಅದೇ ದಿನ ಮತ್ತೊಂದು ಪತ್ರ ಬರವಣಿಗೆ ಕೂಡ ಅವರ ನಡುವೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಮತ್ತೊಂದು ಪತ್ರ ಬರವಣಿಗೆಯಲ್ಲಿ ರೂ. 51 ಲಕ್ಷಕ್ಕೆ ವ್ಯಾಪಾರ ಮಾಡಿಕೊಂಡು ಹಾಗೂ ಅದರಂತೆ ವಾದಿಯು ಪ್ರತಿವಾದಿಗೆ ರೂ. 11 ಲಕ್ಷ ಹಣವನ್ನು ಕೂಡ ಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಇನ್ನೊಂದು ಪತ್ರ ವ್ಯವಹಾರದ ಬಗ್ಗೆ ವಾದಿ ಅಥವಾ ಪ್ರತಿವಾದಿಗಳು ಹೇಳಿಲ್ಲ.

3. ನಿಪಿ 1 ರ ಪ್ರಕಾರ 4 ಲಕ್ಷ ಹಣವನ್ನು ನಗದಾಗಿ ಪ್ರತಿವಾದಿಗೆ ಕೊಟ್ಟಿದ್ದರು. ಆ ನಗದು ಹಣದಲ್ಲಿ ರೂ. 500 ಮುಖಬೆಲೆಯ ನೋಟುಗಳು ಇದ್ದವು. ಪ್ರತಿವಾದಿ ತನ್ನ ಜಮೀನನ್ನು ಯಾವ ಉದ್ದೇಶಕ್ಕೆಂದು ವಾದಿಗೆ ಮಾರಾಟ ಮಾಡುತ್ತಿದ್ದಾರೆ ಎಂಬ ವಿಚಾರ ನನಗೆ ಅವರು ಹೇಳಿರಲಿಲ್ಲ. ಮೇಲೆ ಹೇಳಿದ 4 ಲಕ್ಷ ಹಣವನ್ನು ಪ್ರತಿವಾದಿಗೆ ಕೊಡುವಾಗ ನಾನು, ರಾಮಸ್ವಾಮಿ ಹಾಗೂ ಪತ್ರಬರಹಗಾರರು ಇದ್ದೇವು. ನಿಪಿ-1 ಪತ್ರ ವ್ಯವಹಾರದೊಂದಿಗೆ ಬೇರೆ ಒಂದು ಪತ್ರ ಬರವಣಿಗೆಯಾಗಿತ್ತು ಎಂಬ ಬಗ್ಗೆ ಗೊತ್ತಿಲ್ಲ.

4. ಪ್ರತಿವಾದಿ-2 ನನಗೆ ಪರಿಚಯ ಇಲ್ಲ. ಪ್ರತಿವಾದಿ-2 ರವರಿಗೆ ದಾವಾ ಸೊತ್ತಿನ ಕುರಿತು ಪ್ರತಿವಾದಿ-1 ರವರು ದಿ. 14-11-2009 ರಲ್ಲಿ ಒಂದು ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಆ ಕರಾರು ಪತ್ರ ಪ್ರಕಾರ ಪ್ರತಿವಾದಿ-2 ರವರು

ಪ್ರತಿವಾದಿ-1 ರವರ ಮೇಲೆ ದಾವೆಯನ್ನು ಹೂಡಿ ಡಿಕ್ರಿಯನ್ನು ಪಡೆದಿದ್ದಾರೆ ಎಂದರೆ ಗೊತ್ತಿಲ್ಲ.

5. ನಿಪಿ-1 ಕರಾರು ಪತ್ರವಾದಾಗ ವಾದಿಯು ದಾವಾ ಸೊತ್ತಿನಲ್ಲಿ ಕಾಂಪೌಂಡ್ ಹಾಕಿಸಿಕೊಡುತ್ತೇನೆ ಆ ನಂತರ ಕ್ರಯ ಪತ್ರ ಮಾಡಿಸೋಣ ಎಂದು ಹೇಳಿದ್ದರು. ಆ ರೀತಿ ನಿಪಿ-1 ರಲ್ಲಿ ಬರೆದಿರುವ ಬಗ್ಗೆ ಗೊತ್ತಿಲ್ಲ. ನಿಪಿ 1 ಪತ್ರದ ವಿಚಾರಗಳು ತಿಳಿದುಕೊಳ್ಳುವ ಸಮಯಕ್ಕೆ ಅದರಲ್ಲಿ ಜಮೀನು ಅನ್ಯಕ್ರಾಂತವಾಗಿರುವ ಬಗ್ಗೆ ನಾನು ತಿಳಿದುಕೊಳ್ಳಲಿಲ್ಲ. ನಿಪಿ-1 ಪತ್ರ ಆಗುವ ಕಾಲದಲ್ಲಿ ಮೊದಲು ಪತ್ರಬರಹಗಾರನ ಕಚೇರಿಗೆ ಆ ನಂತರ ಸಬ್ ರಿಜಿಸ್ಟರ್ ಕಚೇರಿಗೆ ಹೋದೆವು. ನಿಪಿ 1 ಕ್ಕೆ ಸಹಿಗಳನ್ನು ಸಬ್ ರಿಜಿಸ್ಟರ್ ಕಚೇರಿಯಲ್ಲಿ ಹಾಕಿದೆವು. ಮೊದಲು ಮಾತುಕತೆಯಾಗಿ ನಂತರ ಕರಾರು ಆಯಿತು. ನಿಪಿ-1 ಪತ್ರ ಆಗುವ ಕಾಲಕ್ಕೆ ಪಕ್ಷಗಾರರು ಪಹಣಿ ಪತ್ರಿಕೆ, ಸ್ಕೇಚ್ ಮತ್ತು ಪ್ರತಿವಾದಿರವರ ಬಳಿ ಇದ್ದ ಖರೀದಿ ಪತ್ರವನ್ನು ಪತ್ರಬರಹಗಾರನಿಗೆ ಕೊಟ್ಟರು. ಪ್ರತಿವಾದಿ -1 ರವರಿಗೆ ಮೋಸ ಮಾಡುವ ಉದ್ದೇಶದಿಂದ ನಾನು, ವಾದಿ ಮತ್ತು ಪತ್ರ ಬರಹಗಾರ ಮತ್ತು ಇತರೇ ಸಾಕ್ಷಿದಾರ ಸೇರಿ ನಿಪಿ 1 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಗೊತ್ತಿಲ್ಲ. ದಾವಾ ಸೊತ್ತಿನ ಕುರಿತು ವಾದಿ ಮತ್ತು ಪ್ರತಿವಾದಿಗಳ ನಡುವೆ ನಿಪಿ-1 ರ ಪ್ರಕಾರ ವ್ಯವಹಾರವಾಗಿಲ್ಲ ಮತ್ತು ಅದರಂತೆ ರೂ. 4 ಲಕ್ಷ ಹಣವನ್ನು ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕಾಲದಲ್ಲಿ ಜಮೀನಿನ ಬೆಲೆ ಸುಮಾರು ಕೋಟಿಗಳು ಆಗಿದ್ದರು ಕೂಡ ಅದನ್ನು ಮರೆ ಮಾಚಿ ಸುಳ್ಳಾಗಿ ಕರಾರು ಪತ್ರ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರಿಗೆ ಮೋಸ ಮಾಡಲು ನಾವು, ವಾದಿ ಹಾಗೂ ಪ್ರತಿವಾದಿ -1 ರವರುಗಳು ಸೇರಿ ನಿಪಿ-1 ನ್ನು ಸುಳ್ಳಾಗಿ

ಮಾಡಿಕೊಂಡಿದ್ದೇವೆ ಎಂದರೆ ಗೊತ್ತಿಲ್ಲ. ವಾದಿ ನನಗೆ ಸಾಕ್ಷಿ ಹೇಳಲು ಕರೆದ ಪ್ರಯುಕ್ತ ನಾನು ಅವರ ಪರವಾಗಿ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ವಾದಿ ಕರೆಯಲಿಲ್ಲ, ನ್ಯಾಯಾಲಯದಿಂದ ನೋಟಿಸ್ ಬಂದ ಮೇರೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಮತ್ತೊಬ್ಬ ಸಾಕ್ಷಿದಾರ ರಾಮಸ್ವಾಮಿ ಗಂಜಿಗುಂಟೆ ಗ್ರಾಮದವನು ಆತ ವ್ಯವಸಾಯ ಮಾಡುತ್ತಾನೆ ಹಾಗೂ ಆತ ನನ್ನ ಸ್ನೇಹಿತನಾಗಿದ್ದಾನೆ. ಪ್ರತಿವಾದಿ 2 ರವರಿಗೆ ಅನ್ಯಾಯ ಮಾಡಲು ನಿಪಿ 1 ನ್ನು ನಾವುಗಳು ಅಕ್ರಮವಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.